ಒ.ಎಸ್ ನಂ. 6967/2016

ಪಿ.ಡಬ್ಲ್ಯೂ-1

ದಿನಾಂಕಃ26-08-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎಸ್ ಸಿ ಎಸ್ ವಕೀಲರಿಂದಃ**

ದಾವಾ ಎ ಶೆಡ್ಯೂಲ್ ಸ್ವತ್ತು ನಿವೇಶನವಾಗಿದ್ದು ಅದು 1 ನೇ ಪ್ರತಿವಾದಿಗೆ ಸೇರಿರುತ್ತದೆ ಎಂದರೆ ಸರಿ. ಸದರಿ ಈ ಸ್ವತ್ತಿಗೆ ಸಂಬಂಧಿಸಿದಂತೆ 1 ಮತ್ತು 2 ನೇ ಪ್ರತಿವಾದಿಯ ನಡುವೆ ನಿಪಿ.2 ರಂತೆ ಜಾಯಿಂಟ್ ಡೆವಲಪ್ ಮೆಂಟ್ ಆಗ್ರಿಮೆಂಟ್ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಪ್ರತಿವಾದಿ 3 ಮತ್ತು 4 ರವರು ಅವರ ವೈಯುಕ್ತಿಕ ಹೆಸರಿನಲ್ಲಿ ಯಾವುದೇ ಕರಾರುಪತ್ರವನ್ನು 1 ನೇ ಪ್ರತಿವಾದಿಯೊಂದಿಗೆ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ಈ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನಗೆ ಪ್ರತಿವಾದಿ 3 ಮತ್ತು 4 ರವರು ಪರಿಚಯಸ್ಥರಾಗಿರುತ್ತಾರೆ ಎಂದರೆ ಸಾಕ್ಷಿ ಬಿಲ್ಡರ್ ಗಳಾಗಿ ಅವರ ಪರಿಚಯ ಇರುತ್ತದೆ ಎನ್ನುತ್ತಾರೆ. 3 ಮತ್ತ 4 ನೆ ಪ್ರತಿಾದಿಗಳು ನಿಪಿ.3 ದಾಖಲೆಗೆ ತಮ್ಮ ವೈಯುಕ್ತಿಕ ಹೆಸರಿನಲ್ಲಿ ಪಕ್ಷಕಾರರಲ್ಲ ಎಂದರೆ ಸಾಕಿ 2 ನೇ ಪ್ರತಿವಾದಿಯ ಜೊತೆ ಸೇರಿಕೊಂಡು ಕರಾರುಪತ್ರ ಮಾಡಿರುತ್ತಾರೆ ಎನ್ನುತ್ತಾರೆ.

ನನಗೆ ನಿಪಿ.2 ಕರಾರುಪತ್ರದ ಒಕ್ಕಣೆಗಳ ಬಗ್ಗೆ ಮಾಹಿತಿ ಇರುತ್ತದೆ. ನಿಪಿ.2 ರಲ್ಲಿ ಸದರಿ ಸ್ವತ್ತಿನಲ್ಲಿ ಕಟ್ಟಬೇಕಾಗಿರುವ ಅಪಾರ್ಟ್ ಮೆಂಟ್ ಗಳ ಹಂಚಿಕೆ ಬಗ್ಗೆ ಉಲ್ಲೇಖ ಇರುತ್ತದೆ ಎಂದರೆ ಸರಿ. ನಿಪಿ.2 ದಾಖಲೆ ಹೊರತುಪಡಿಸಿ 1 ಮತ್ತು 2 ನೇ ಪ್ರತಿವಾದಿಗಳ ನಡುವೆ ಪ್ರತ್ಯೇಕ ಶೇರಿಂಗ್ ಆಗ್ರಿಮೆಂಟ್ ಆಗಲೀ ಅಥವಾ ಸಪ್ರಿಮೆಂಟರಿ ಅಗ್ರಿಮೆಂಟ್ ಆಗಲೀ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಶೇರಿಂಗ್ ಆಗ್ರಿಮೆಂಟ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. 1 ಮತ್ತು 2 ನೇ ಪ್ರತಿವಾದಿಗಳ ನಡುವೆ ಶೇರಿಂಗ್ ಆಗ್ರಿಮೆಂಟ್ ಆಗದೇ ಇರುವ ಕಾರಣ ಯಾವ ಅಂತಸ್ತಿನ ಯಾವ ಪ್ಲಾಟನನ್ನು ಯಾರಿಗೆ ಕೊಬೇಕು ಎಂದು ಲಿಖಿತ ಒಪ್ಪಂದಗಳು ಆಗಿಲ್ಲ ಎಂದರೆ ಸರಿಯಲ್ಲ. ನಿಪಿ.2 ಕರಾರುಪತ್ರ ಅಲ್ಲದೇ ನನ್ನ ಮತ್ತು 2 ನೇ ಪನಿರತಿವಾದಿಯ ನ ಡುವ ಬೇರೆ ಯಿೂವುದೇ ಕರಾರುಪತ್ರಗಳು

ಆಗಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು 2 ಕರಾರುಪತ್ರಗಳು ಆಗಿದ್ದು ಅದರಲ್ಲಿ ಒಂದು ಕ್ರಯದ ಕರಾರುಪತ್ರ ಹಾಗೂ ಮತ್ತೊಂದು ಬ್ಯಾಂಕಿಗೆ ಸಂಬಂಧಪಟ್ಟ ಕರಾರುಪತ್ರ ಎನ್ನುತ್ತಾರೆ. ನಾನು ಮತ್ತು 3 ಮತ್ತು 4 ನೇ ಪ್ರತಿವಾದಿಗಳು ಬಹಳ ಚಿರಪರಿಚಯಸ್ಥರಾಗಿರುವ ಕಾರಣ ನಾವು ಮೂವರು ಪರಸ್ಪರ ಶಾಮೀಲಾಗಿ ನಿಪಿ.2 ಅನ್ನು ಹೊರತುಪಡಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಇತರ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮತ್ತು 1 ನೇ ಪ್ರತಿವಾದಿಯ ನಡುವೆ ಎಂದೂ ಯಾವುದೇ ರೀತಿಯ ಹಣದ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ನನಗೆ 1 ನೇ ಪ್ರತಿವಾದಿ ದಾವಾ ಬಿ-ಶೆಡ್ಯೂಲ್ ಸ್ವತ್ತನ್ನು ಎಂದೂ ಸ್ವಾಧೀನಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ 1 ನೇ ಪ್ರತಿವಾದಿ ಆಗಲೀ ಅಥವಾ 2 ನೇ ಪ್ರತಿವಾದಿ ಆಗಲೀ ದಾವಾ ಬಿ-ಶೆಡ್ಯೂಲ್ ಸ್ವತ್ತಿನ ಸ್ವಾಧೀವನ್ನು ನನನಗೆ ಹಸ್ತಾಂತರಿಸಿರುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. 1 ನೇ ಪ್ರತಿವಾದಿ ನನ್ನಿಂದ ನಿಪಿ.16 ರಲಿಲ ಉಲ್ಲೇಖಿಸಿರುವಂತೆ ನಗದು ಹಣವಾಗಲೀ ಅಥವಾ ಚೆಕ್ಕನ್ನಾಗಲೀ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ.16 ದಾಖಲೆಯನ್ನು ನನ್ನ ಅನುಕೂಲಕ್ಕೆ ತಕ್ಕಂತೆ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನುಸೃಷ್ಟಿ ಮಾಡಿರುವಂತಹ ನಿಪಿ.3 ದಾಖಲೆಯ ಆಧಾರದ ಮೇಲೆ ಈ ಸುಳ್ಳು ದಾವೆ ಸಲ್ಲಿಸಿ ಪ್ರತಿವಾದಿಗಳ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳ ನಡುವೆ ದಾವಾ ಎ-ಶೆಡ್ಯೂಲ್ ಸ್ವತ್ತಿನಲ್ಲಿ ಕಟ್ಟಿರುವ ಕಟ್ಟಡದ ಬಗ್ಗೆ ಭಿನ್ನಾಬಿಪ್ರಾಯಿಗಳು ಇರುತ್ತವೆ ಎಂದರೆ ಸಾಕ್ಷಿ ಈ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ಇಲ್ಲಿಯತನಕ 2 ನೇ ಪ್ರತಿವಾದಿ ದಾವಾ ಎ-ಶೆಡ್ಯೂಲ್ ನಲ್ಲಿ ಕಟ್ಟಿರುವ ಕಟ್ಟಕಡಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಅಧಿಕಾರಿಗಳಿಂದ ಆಕ್ಯೂಪೆನ್ಸಿ ಸರ್ಟೀಪಿಕೇಟ್ ಆಗಲೀ ಅಥವಾ ಕಂಪ್ಲಿಶನ್ ಸರ್ಟೀಪಿಕೇಟ್ ಆಗಲೀ ಪಡೆದುಕೊಂಡಿಲ್ಲ ಎಂದರೆ ಸಾಕ್ಷಿ ಈ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ದಾವಾ ಬಿ ಶೆಡೂಲ್ ಗೆ ಸಂಬಂಧಿಸಿದಂತೆ ಅಕ್ರಮ ದುರ್ಲಾಭ ಪಡೆದುಕೊಳ್ಳಲು ಸುಳ್ಳು ದಾಖಲೆಗಳ ಆಧಾರದ ಮೇಲೆ ಈ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ಇಶ್ರತ್ ಜಹಾನ್ ಆರಾ)

**III ನೇ ಎ.ಸಿ.ಸಿ & ಎಸ್.ಜೆ, ಬೆಂಗಳೂರು.**